ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಸ್ವೀಕರಿಸಿದ ನರ್ಸ್‌ಗಳ ಮನದಾಳದ ಮಾತು

# ನನ್ನ ಕೈಲಾಗಲ್ಲ ಸಿಸ್ಟರ್ ಎಂದಾಗ...

ಪ್ರಜಾವಾಣಿ ವಾರ್ತೆ



ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ವಿಜೇತರೊಂದಿಗೆ ಡಾ.ಎಸ್.ಸಚ್ಚಿದಾನಂದ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್‌ಕುಮಾರ್ ಪಾಂಡೆ, ರಾಜ್ಯಪಾಲ ವಜುಭಾಯಿ ವಾಲಾ, ಮಾಜಿ ಶಾಸಕ ಐವನ್ ನಿಗ್ರಿ ಇದ್ದರು

ಬೆಂಗಳೂರು: ಹೃದಯಾಘಾತಕ್ಕೆ ಒಳಗಾದವರೊಬ್ಬರು ನನ್ನ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, 'ಇನ್ನು ನನ್ನ ಕೈಲಾಗಲ್ಲ ಸಿಸ್ಟರ್...' ಎಂದು ಹೇಳುತ್ತಲೇ ಪ್ರಾಣಬಿಟ್ಟರು. 'ಅಲ್ಲಿ ಅವರ ಪತ್ನಿ, ಕುಟುಂಬದವರು ಇದ್ದರು. ಆದರೆ, ಕೊನೇ ಕ್ಷಣದಲ್ಲಿ ಅವರ ಪಾಲಿಗೆ ಎಲ್ಲವೂ ನಾವೇ ಆಗಿದ್ದೆವು...'

– ಇದು ಸಿ.ವಿ.ರಾಮನ್ ಜನರಲ್ ಆಸ್ಪತ್ರೆಯ ನರ್ಸ್ ಹೇಮಾವತಿ ಎಚ್.ಪಿ. ಅವರ ಅನುಭವ ಕಥೆಗಳಲ್ಲೊಂದು.

ರಾಜಭವನದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಆಂಗ್ಲೋ ಇಂಡಿಯನ್ ಯುನಿಟಿ ಸೆಂಟರ್ ಆಶ್ರಯದಲ್ಲಿ ಹಮ್ಮಿಕೊಂಡ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಸ್ವೀಕರಿಸಿ ಅವರು ತಮ್ಮ ಅನುಭವ ಹಂಚಿಕೊಂಡರು.

'ಸಾಮಾನ್ಯ ಆರೈಕೆ ಕಾರ್ಯ ಮಾತ್ರವಲ್ಲದೆ ಶವಾಗಾರದಲ್ಲಿ ವೈದ್ಯರಿಗೆ ಸಹಾಯಕಿಯಾಗಿಯೂ ಕೆಲಸ ಮಾಡಿದ್ದೆ. ಎಲ್ಲಕ್ಕಿಂತಲೂ ತೃಪ್ತಿ ಕೊಟ್ಟದ್ದೆಂದರೆ ನನ್ನ ಹುಟ್ಟೂರು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿ, ಸುತ್ತಮುತ್ತಲಿನ ಊರುಗಳಾದ ಸೂರಲಬ್ಬಿ, ತಾಕೇರಿಗಳಲ್ಲಿ ಪ್ರವಾಹ ಸಂತ್ರಸ್ತರಿಗಾಗಿ ಕೆಲಸ ಮಾಡಿದ್ದು. ಈ ವೃತ್ತಿ ನನ್ನ ಊರಿನಲ್ಲಿ ಸೇವೆ ಮಾಡುವ ಅವಕಾಶ ಒದಗಿಸಿದೆ' ಎಂದು ಅವರು ಭಾವುಕರಾದರು.

ಸಮಾರಂಭದಲ್ಲಿ ನರ್ಸಿಂಗ್ ಕಾಲೇಜುಗಳ ಉಪನ್ಯಾಸಕರೂ ಸೇರಿ 12 ಜನರಿಗೆ ರಾಜ್ಯಪಾಲ ವಜುಭಾಯಿ ವಾಲಾ ಪ್ರಶಸ್ತಿ ಪ್ರದಾನ ಮಾಡಿದರು.

ರಾಮನಗರ ಜಿಲ್ಲೆ ಚನ್ನಪಟ್ಟಣದ ಜನರಲ್ ಆಸ್ಪತ್ರೆಯ ನರ್ಸ್ ಎಚ್.ಎನ್.ಸ್ವಾಮಿ ಅವರದ್ದು ಉತ್ತರಾಖಂಡ ಪ್ರವಾಹಪೀಡಿತ ಪ್ರದೇಶದಲ್ಲಿ ಕೆಲಸ ಮಾಡಿದ ಅನುಭವ. ಇದೇ ಕೆಲಸಕ್ಕಾಗಿ 2013ರಲ್ಲಿ ರಾಜ್ಯ ಸರ್ಕಾರ ಅವರಿಗೆ ಬೆಳ್ಳಿ ಪದಕ ನೀಡಿ ಗೌರವಿಸಿತ್ತು.

'ಲಕ್ಷಾಂತರ ಜನ ಸತ್ತಿದ್ದಾರೆ. ಸೈನಿಕರ ಸೇವೆಯನ್ನೊಮ್ಮೆ ನೋಡಬೇಕು. ಅದರ ಮುಂದೆ ನಮ್ಮದೇನೂ ಇಲ್ಲ' ಎಂದು ವಿನಮ್ರವಾಗಿ ನುಡಿದರು ಸ್ವಾಮಿ.

ಎಚ್.ಎಸ್.ಪುಷ್ಪಾವತಿ ಅವರದ್ದು ನರ್ಸಿಂಗ್ ವೃತ್ತಿಯ ಜತೆಗೆ ಆದರ ಅನುಭವ ಕಥನಗಳನ್ನು ಬಿಚ್ಚಿಡುವ ಬರವಣಿಗೆ ಪ್ರವೃತ್ತಿಯಿದೆ. ಕವನ ಸಂಕಲನದ ಜತೆಗೆ ವೃತ್ತಿ ಸಂಬಂಧಿ ಪುಸ್ತಕಗಳನ್ನು ಅವರು ಹೊರ ತಂದಿದ್ದಾರೆ.

ಬಾಬಿ ಚಲಿಲ್ ಯೊಹಣ್ಣನ್ ಅವರದು ಒಂದೆಡೆ ನರ್ಸಿಂಗ್ ಕಾಯಕದ ಜತೆಗೆ ಬಹುಮುಖಿ ಬದುಕು.

ಕೊಪ್ಪಳ ಜಿಲ್ಲಾ ಆಸ್ಪತ್ರೆಯ ನರ್ಸ್ ಮಾಲತೇಶ ಜುಮ್ಮಣ್ಣವರ ಅವರದ್ದು ಸೋಂಕು ನಿವಾರಣೆ ನಿಟ್ಟಿನಲ್ಲಿ ಕೆಲಸ. ಜೈವಿಕ ವೈದ್ಯಕೀಯ ತ್ಯಾಜ್ಯ ವಸ್ತುಗಳ ನಿರ್ವಹಣೆ ಬಗ್ಗೆ ತಮ್ಮದೇ ಆದ ಆಲೋಚನೆಗಳನ್ನು ಆಸ್ಪತ್ರೆಯಲ್ಲಿ ಪ್ರಯೋಗಕ್ಕಿಳಿಸಿದ್ದಾರೆ.

ಕಲಬುರ್ಗಿ ಸರ್ಕಾರಿ ನರ್ಸಿಂಗ್ ಕಾಲೇಜಿನ ಶ್ರೀಕಾಂತ್ ಬಿ.ಫುಲಾರಿ ಅವರು ಉತ್ತಮ ನರ್ಸಿಂಗ್ ಉಪನ್ಯಾಸಕ ಪ್ರಶಸ್ತಿ ಪುರಸ್ಕೃತರು.

'ಕಲಬುರ್ಗಿಗೆ ನರ್ಸಿಂಗ್ ಕಾಲೇಜು ತರುವಲ್ಲಿ ಶ್ರಮಿಸಿದ್ದೆವು. ರಾಜ್ಯ ಮಹಿಳಾ ನಿಲಯಗಳಲ್ಲಿ ನೆಲೆಸಿದ್ದ 6 ಜನ ಅನಾಥ ಹೆಣ್ಣುಮಕ್ಕಳಿಗೆ ನರ್ಸಿಂಗ್ ಶಿಕ್ಷಣ ಕೊಡಿಸಿ ಅವರು ಮುಖ್ಯವಾಹಿನಿಗೆ ಬರುವಂತೆ ಶ್ರಮಿಸಿದ್ದು... ಹೀಗೆ ಹಲವು ನೆನಪುಗಳಿವೆ' ಎಂದು ಹೇಳಿದರು.

## ನೈಟಿಂಗೇಲ್ ಪ್ರಶಸ್ತಿ ಪುರಸ್ಕೃತರು

- ಪ್ರೊ.ಸಂಗಮೇಶ ಬಿಡಗುಂದಿ; ಕಾಳಭೈರವೇಶ್ವರ ಸ್ವಾಮಿ ಕಾಲೇಜ್ ಆಫ್ ನರ್ಸಿಂಗ್ ಬೆಂಗಳೂರು
- ಶ್ರೀಕಾಂತ್ ಬಿ.ಫುಲಾರಿ; ಸರ್ಕಾರಿ ನರ್ಸಿಂಗ್ ಕಾಲೇಜು ಕಲಬುರ್ಗಿ
- ಎಂ.ಅರುಲ್ ಚೆವ್ವುಲಾ ಜಾಸ್ಮಿನ್; ನರ್ಸಿಂಗ್ ಸೂಪರಿಂಟೆಂಡೆಂಟ್, ಡಾ.ಮಾಲತಿ ಮಣಿಪಾಲ್ ಆಸ್ಪತ್ರೆ ಬೆಂಗಳೂರು
- ಕ್ಯಾ.ಆರ್.ತಂಗಂ; ಸ್ಪೆಷಲಿಸ್ಟ್ ಹೆಲ್ತ್ ಸಿಸ್ಟಂ ಪ್ರೈವೇಟ್ ಲಿಮಿಟೆಡ್ ಬೆಂಗಳೂರು
- ಶಾನಿ ಜಾನ್ ಸೀಕ್ವೇರಾ; ನರ್ಸ್ ಕಂ ಕೌನ್ಸೆಲರ್ ಕ್ರೈಸ್ಟ್ ಸಂಸ್ಥೆ ಬೆಂಗಳೂರು
- ಎಚ್.ಎಸ್.ಪುಷ್ಪಾವತಿ; ಸ್ಟಾಫ್ ನರ್ಸ್, ಜೆಜೆಎಂ ವೈದ್ಯಕೀಯ ಕಾಲೇಜು ಬಾಪೂಜಿ ಆಸ್ಪತ್ರೆ ದಾವಣಗೆರೆ
- ಹೇಮಾವತಿ ಎಚ್.ಪಿ.; ಸ್ಟಾಫ್ ನರ್ಸ್ ಸಿ.ವಿ.ಆರ್. ಜನರಲ್ ಆಸ್ಪತ್ರೆ ಬೆಂಗಳೂರು
- ಸ್ವಾಮಿ ಎಚ್.ಎನ್.; ಸ್ಟಾಫ್ ನರ್ಸ್ ಸರ್ಕಾರಿ ಜನರಲ್ ಆಸ್ಪತ್ರೆ ಬೆಂಗಳೂರು
- ಮಾಲತೇಶ್ ಜೆ.; ಸ್ಟಾಫ್ ನರ್ಸ್ ಜಿಲ್ಲಾ ಆಸ್ಪತ್ರೆ ಕೊಪ್ಪಳ
- ಬಾಬಿ ಚಲಿಲ್ ಯೊಹಣ್ಣನ್; ಸೀಗೆಹಳ್ಳಿ ಹೆರಿಗೆ ಆಸ್ಪತ್ರೆ ಬೆಂಗಳೂರು
- ರೇಣು ಮಹಾರಾಜನ್; (ಬಿಎಸ್ಸಿ ನರ್ಸಿಂಗ್ ಪ್ರಥಮ ರ್‍ಯಾಂಕ್ ವಿಜೇತ) ವಿದ್ಯಾರ್ಥಿನಿ, ಬ್ರೈಟ್ ನರ್ಸಿಂಗ್ ಕಾಲೇಜು ಬೆಂಗಳೂರು
- ಹನುಮಂತ ವಡ್ಡರ್; (ಜನರಲ್ ನರ್ಸಿಂಗ್ ಪ್ರಥಮ ರ್‍ಯಾಂಕ್ ವಿಜೇತ) ಬಿಎಲ್‌ಡಿಇಎಸ್ ಸ್ಕೂಲ್ ಆಫ್ ನರ್ಸಿಂಗ್ ವಿಜಯಪುರ

CITY'S NIGHTINGALE

# Nurse who helped Carlton fire survivors feted

SURAKSHA P @ Bengaluru

THE 2010 Carlton Towers fire accident is still etched in the memory of Bangaloreans where people jumped to death on Old Airport Road from a blazing tower.

Nurse Arul Beulah Jasmine was a staff nurse then working in Manipal Hospital that was 800m away from the site of the fire. Arul was recently honoured with the Florence Nightingale Award for disaster management, both in the Carlton Towers tragedy and one at Malathi Manipal Hospital last year where patients were evacuated because of smoke.

The Florence Nightingale Medal is the highest international distinction that can be awarded to a nurse. It recognises exceptional courage and devotion towards caring for victims of a natural disaster, exemplary services, creative and pioneering spirit in the areas of public health or nursing education.



In this June, 2017 photo nurse Arul Beulah Jasmine is seen in action at Malathi Manipal Hospitals in JP Nagar. She led a team of 107 nurses and evacuated patients after a short-circuit caused smoke to emanate in the building | **Vinod Kumar T**

Currently, a nursing superintendent at Malathi Manipal Hospital with 107 nurses reporting to her, the 38-year-old says last year her 80-bedded hospital was filled with smoke due to a short circuit in the first floor and that is when she had to take the initiative to evacuate patients.

"On 13 June last year, I was on rounds in the morning and I was informed that there is a smoke. I got the nurses to evacuate babies and there was a deaf and dumb mother in the corridor who was waiting for delivery. She wasn't aware of what was happening. We initially shifted them to the third floor but later the smoke spread so we had to shift everybody out of the building," Arul said.

"At a time, our hospital can accommodate 80 to 90 patients in our three-storeyed building. We were certified by the fire department after the incident but we had fire drills from the beginning. First, we need to assess what type of fire it is and we should also know how to operate a fire extinguisher. We have to issue a code red to alert the concerned immediately," she added.

Of the 2010 tragedy she said, "There were eight to nine deceased. We were responsible for last minute care and handing over of the bodies. We rushed to the casualty. We were swamped with patients so we had shift them to the conference hall. It wasn't me alone. It was a team work."

> **Our shift had just ended, so we rushed to the casualty. We were swamped with patients so we had shift them to the conference hall. It wasn't me alone. It was a team work**
>
> Nurse Arul Beulah Jasmine on 2010 Carlton Towers fire

# Ms. Arul Beulah Jasmine, Nursing Superintendent – Malathi Manipal Hospitals awarded prestigious Florence Nightingale Award 2018

Published on December 25, 2018

Bangalore : Its gives us immense pleasure to announce that Ms. Arul Beulah Jasmine, Nursing Superintendent – Malathi Manipal Hospitals is selected for being awarded the prestigious Florence Nightingale Award 2018. She will be receiving the award from the honorable Governor of Karnataka on 22nd December 2018.The Florence Nightingale Medal is the highest international distinction that can be awarded to a nurse. It recognizes exceptional courage and devotion towards caring for victims of a natural disaster, exemplary services, creative and pioneering spirit in the areas of public health or nursing education.




Arul Beulah joined Manipal Hospital Bangalore as a Nursing Staff in the department of Cardiac Care on 14-Sep-2005. Later moved up the ladder as a Shift In charge, Assistant Ward In charge, Supervisor in the Cardiac Ward and then as Nursing Superintendent. Arul Beulah is been awarded this award for her service towards society which includes a major role played by her in evacuating the patients during a Fire incident at Carlton Towers, Old Airport Road in the year 2010 and at Malathi Manipal Hospitals in the year 2017

SEE COMMENTS